**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 18.09.2021.**

**1] ಚಡಚಣ ಪೊಲೀಸ ಠಾಣೆ ಗುನ್ನೆ ನಂ: 92/2021 ಕಲಂ: 32. 34 ಕೆ.ಇ. ಆ್ಯಕ್ಟ**

ದಿನಾಂಕ: 17.09.2021 ರಂದು 11.15 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಸಂಜೀವ ಶಿವಣ್ಣ ಬಡಿಗೇರ್ ಸಾ॥ ಹತ್ತಳ್ಳಿ ತಾ॥ ಚಡಚಣ ಈತನು ತನ್ನ ಫಾಯಿದೆಗೊಸ್ಕರ ಸರ್ಕಾರದಿಂದಾಗಲಿ ಅಥವಾ ಸಂಬಂಧಪಟ್ಟ ಇಲಾಖೆಯಿಂದಾಗಲಿ ಯಾವುದೆ ಲೈಸನ್ಸ್ ವ, ಪರವಾಣಿಗೆಯನ್ನು ಪಡೆಯದೆ ತನ್ನ ಬಾಬತ್ತ ಕಿರಾಣಿ ಅಂಗಡಿಯ ಹತ್ತಿರದ ಖುಲ್ಲಾ ಜಾಗೆಯಲ್ಲಿ 3,372=00 ರೂ ಕಿಮ್ಮತ್ತಿನ 180 ಎಂ.ಎಲ್.ಅಳತೆಯ ಓರಿಜನಲ್ ಚಾಯಿಸ್ ಕಂಪನೀಯ ಸರಾಯಿ ಪೌಚಗಳನ್ನು ತಾಬಾದಲ್ಲಿ ಇಟ್ಟುಕೊಂಡು ಮಾರಾಟ ಮಾಡುವಾಗ ಸಿಕ್ಕ ಅಪರಾಧ. ಈ ಬಗ್ಗೆ ಸ॥ತ॥ ಸ:ತ: ಎಮ್.ಎ. ಸತಿಗೌಡರ. ಪಿಎಸ್ಐ. ಚಡಚಣ ಪೊಲೀಸ ಠಾಣೆ, ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.09.2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಚಡಚಣ ಪೊಲೀಸ ಠಾಣೆ ಗುನ್ನಾ ನಂ: 93/2021 ಕಲಂ: 78(3) ಕೆ.ಪಿ. ಆ್ಯಕ್ಟ**

ದಿನಾಂಕ: 17.09.2021 ರಂದು 14.30 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಲಕ್ಷ್ಮಣ @ ಗುರು @ ಗುರುನಾಥ ತಂ. ಸೀತಾರಾಮ ರಾಠೋಡ ಸಾ॥ ಜಿಗಜೇವಣಗಿ ಸೂರಮುತ್ಯಾನ ತಾಂಡಾ ತಾ॥ ಚಡಚಣ ಈತನು ಜಿಗಜೇವಣಗಿ ಗ್ರಾಮದ ಬಸ್ಸಸ್ಟ್ಯಾಂಡ ಹತ್ತಿರ ಸಾರ್ವಜನಿಕ ಜಾಗೆಯಲ್ಲಿ 01 ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಕಲ್ಯಾಣ ಅಂಬುವ ಓ.ಸಿ.ಜೂಜಾಟವನ್ನು ಆಡುವಾಗ ಜೂಜಾಟ ಆಡಲು ಬಳಸಿದ ರೊಖ ಹಣ: 930/- ರೂ, ಓ.ಸಿ.ನಂಬರ ಬರೆದ ಚೀಟಿ - 01, ನೀಲಿ ಶಾಯಿಯ ಬಾಲ್‌ಪೆನ್ 01 ನೇದ್ದರ ಸಮೇತ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಎಮ್. ಎ. ಸತಿಗೌಡರ. ಪಿ.ಎಸ್.ಐ. ಚಡಚಣ ಪೊಲೀಸ ಠಾಣೆ, ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.09.2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ ನಂ: 168/2021 ಕಲಂ: 78(3) ಕೆ.ಪಿ.ಆ್ಯಕ್ಟ**

ದಿನಾಂಕ: 16.09.2021 ರಂದು 14.45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ವಸಂತ ಸಂಗಪ್ಪ ಚಲವಾದಿ ಸಾ: ತಂಗಡಗಿ ತಾ: ಮುದ್ದೇಬಿಹಾಳ. ಈತನು ಮುದ್ದೇಬಿಹಾಳ ಪಟ್ಟಣದ ಹಳೇ ತಹಶೀಲ್ದಾರ ಆಫಿಸ್ ಹತ್ತಿರ ಮೇನ್ ಬಜಾರದ ರಸ್ತೆಯ ಬಾಜು ಸಾರ್ವಜನಿಕ ಸ್ಥಳದಲ್ಲಿ. ಜನರಿಂದ ಹಣ ಇಸಿದುಕೊಂಡು 1 ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇರೆಗೆ ಕಲ್ಯಾಣ ಮಟಕಾ ಅನ್ನುವ ಓಸಿ ಮಟಕಾ ಜೂಜಾಟವನ್ನು ಆಡುತ್ತಿದ್ದಾಗ ಸಿಕ್ಕಿದ್ದು ಅದೆ. ಈ ಬಗ್ಗೆ ಸ:ತ: ಶ್ರೀಮತಿ ರೇಣುಕಾ ಜಕನೂರ ಪಿ.ಎಸ್.ಐ. [ಕಾ:ಸು] ಮುದ್ದೇಬಿಹಾಳ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.09.2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.